ಎರಡೂ ಇದ್ದರೂ ಮರಾಠೀದ ಜೋರಿತ್ತು.

ನಮ್ಮವ್ವ ಭಾಳ ಛಂದಿದ್ಲು. ಚೂಪ ಸಂಪಿಗಿ ಹೂವಿನಗತೆ ಮೂಗು, ಅದ ಬಣ್ಣ, ಅಗಲ ಕಣ್ಣಗೋಳು, ಎತ್ತರಾಗಿ ನೂರು ಮಂದ್ಯಾಗ ಎದ್ದು ಕಾಣಸತಿದ್ಲು. ಅಪ್ಪ ಎತ್ತರಾದರೂ ಸಾದಾ ಇದ್ದ. ಆದರ ಮದವ್ಯಾಗ ಭಾಳ ಲಕ್ಷಣ ಇದ್ನಂತ. ಅಪ್ಪನ ಸರಕಾರಿ ನೌಕರಿ ನೋಡಿ ಮದವಿ ಮಾಡಿ ಕೊಟ್ಟಿದ್ರು. ಅವ್ವನ ತೌರಮನ್ಯಾಗ ಹೊಲಾ, ಮನಿ ಇಟಗೊಂಡು ಇದ್ದುಳ್ಳಾವ್ರಿದ್ದರು. ಮದ್ಲೆಲ್ಲಾ ಛೋಲೋನ ಇತ್ತಂತ. ಅಪ್ಪ ಯಾವಾಗರೆ ಕುಡದರೂ ಅವ್ವನ್ನ ಭಾಳ ಛೋಲೋ ನೋಡಕೋತಿದ್ನಂತ. ನಾ ಹುಟ್ಟೋತನಕಾ. ಆಮ್ಯಾಲೆ ಶರೆ ಅಂಗಡಿ ಕಾಯಂ ಗಿರಾಕ್ಯಾದ. ಅವ್ವ ಬಿಡಸಲಿಕ್ಕೆ ಜಗತ್ತಿನ್ಯಾಗಿದ್ದ ಉಪಾಯಾ ಎಲ್ಲಾ ಮಾಡಿದ್ಲಂತ. ಉಹ್ಞೂಂ, ಅಂವ ಬಿಡಲಿಲ್ಲ. ಮನಿ ನಡೀಲಿಲ್ಲ. ಅವ್ವ ಎರಡೆರಡು ದಿವ್ಸ ಬರೇ ನೀರ ಕುಡದು ನಮಗ ಊಟಾ ಬಡಸತಿದ್ಲು. ಮುಂದ... ತಾನ ಕೆಲಸಕ್ಕ ಹೊಂಟು ನಿಂತ್ಲು. ನಾಕಮನಿ ಭಾಂಡಿ, ಒಗ್ಯಾಣ(ಬಟ್ಟೆ) ಹಿಡದಾಗ ನಮ್ಮ ಹೊಟ್ಟಿ ತುಂಬಲಿಕ್ಕತ್ತು. ಆದರ ಪರಿಸ್ಥಿತಿ ಸುಧಾರಸಲಿಲ್ಲ. ಸಾಲ ತೀರಲಿಲ್ಲ. ಆವಾಗ ಎಲ್ಲಾ ಬಿಟ್ಟು ಅವ್ವ ಶ್ರೀಮಂತರೊಬ್ಬರ ಮನ್ಯಾಗ ಬಾಳಂತನದ ಕೆಲಸಾ ಹಿಡದ್ಲು. ತಿಂಗಳಗಟ್ಟಲೆ ಅಲ್ಲೇ ಇದ್ದಂಗ ಲೆಕ್ಕ. ಆದರ ಐದು ನೂರು ರುಪಾಯಿ ಪಗಾರ. ಆಗಿನ ದಿವ್ಸಕ್ಕ ಅದು ಧೊಡ್ಡ ರಕಮು. ಇನ್ನೊಂದು ಹೇಳಬೇಕಂದ್ರ ಆವಾಗ ಬೆಳಗಾವಿ, ಖಾನಾಪುರಗೊಳ ಮ್ಯಾಲ ಮುಂಬಯಿ ಪ್ರಭಾವ ಭಾಳಿತ್ತು. ಶ್ರೀಮಂತರು ಮುಂಬೈದಿಂದ ಬಂದು ಬೆಳಗಾವ್ಯಾಗ, ಖಾನಾಪುರದಾಗ ತ್ವಾಟಾಪಟ್ಟಿ ತೊಗೊಂಡು ಬಂಗಲೆ ಕಟ್ಟಿಸಿ ಬ್ಯಾಸಿಗಿಗೊಮ್ಮೆ ಬಂದು ಇರತಿದ್ರು. ಫಾರ್ಮಹೌಸ್ ಅಂತೀರಲ್ಲ, ಆ ಥರಾನ. ಇಂಥಾವ್ರ ಮನ್ಯಾಗ ಅವ್ವ ಕೆಲಸಕ್ಕ ಹೋಗಿದ್ಲು.

ಅವ್ವ ರಾತ್ರಿಯೆಲ್ಲಾ ಅಳೋ ಕೂಸಿನ್ನ ಸಂಭಾಳಸಲಿಕ್ಕೆ ರಾತ್ರಿ ಅವರ ಮನ್ಯಾಗ ಇರಾಕಿ. ಮುಂಜಾನೆ ಕೂಸು, ಬಾಣಂತಿಗೆ ನೀರು ಹಾಕಿ ಎರದು, ಅಗ್ಗಿಷ್ಟಕಿ ಕೊಟ್ಟು ಕಾಸಿ, ಅವರ ಅರವಿ ವಗದು ಮನಿಗೆ ಬರಾಕಿ. ಇದ್ದದ್ದುಂಡು ಮಲಕೊಂಡು ಬಿಡಾಕಿ. ಮತ್ತ ಮಧ್ಯಾಹ್ನ ದಾಟೋದ್ರಾಗ ಹೊಂಟು ನಿಂದ್ರಾಕಿ. ಹಿಂಗಾಗಿ ಮನಿ ಜವಾಬ್ದಾರಿ ಎಲ್ಲಾ ಗಂಗಾಂದ. ಅಕಿ ಎನರೆ ಕೆಲಸಾ ಮಾಡ್ಲಿಕ್ಕೆ ಹೋದರೂ ಗಂಗಾ 'ಅವ್ವಾ, ರಾತ್ರೆಲ್ಲಾ ನಿದ್ದ್ಯಾಗಿಲ್ಲಂತೀದಿ. ಒಂಚೂರ ಮಲಕೊಂಡೇಳ. ನಾ ಎಲ್ಲಾ ಕೆಲಸಾ ಮಾಡಕೋತೇನಿ' ಅನ್ನಾಕಿ. ಮನಿ ಜೋಡಿ ನಮ್ಮನ್ನೆಲ್ಲಾ ಸಂಭಾಳಸೋದು, ಅಡಿಗಿ, ಭಾಂಡಿ, ಒಗ್ಯಾಣ ಎಲ್ಲಾ ಸಣ್ಣ ಹುಡಗಿ ತಲಿ ಮ್ಯಾಲೆ ಬಿತ್ತು. ಆವಾಗ ಅಕಿದು ಮುಲ್ಕಿ ಅಂದರ ಯೋಳನೇತ್ತಾ ಆಗಿತ್ತು. ಇದರ ಕಾಲಾಗ ಸಾಲಿ ಬಿಡಬೇಕಾತು. ಆವಾಗಿಂದ ಅಕಿ ನಮಗ ತಾಯಿನ ಆದ್ಲು ಅಂದ್ರೂ ಅಡ್ಡಿ ಇಲ್ಲ. ಯಾಕಂದ್ರ ಅವ್ವನ ಮಾರಿ ವಾರಕ್ಕೊಮ್ಮೆ ನೋಡತಿದ್ವಿ. ಆದರ ಮನಿ ಪರಿಸ್ಥಿತಿ ಸುಧಾರಸ್ತು. ಸಾಲ ತೀರಿ ಅಕ್ಕಿ, ಹಿಟ್ಟು, ಕಾಳು, ಕಡಿ ಬಂದು ಬಿದ್ದು. ನಾವು ಹೊಟ್ಟಿ ತುಂಬ ಊಟಾ ಮಾಡಿ, ಸಾಲಿ ಫೀಸು ಕಟ್ಟಿ... ಚಪ್ಪಲ ಹಾಕ್ಕೊಂಡು ಸಾಲಿಗೆ ಹೋಗಲಿಕ್ಕತ್ತಿದ್ವಿ.

ಎರಡ ತಿಂಗಳದಾಗ ಗಂಗಾ ಭಾಳ ಛೋಲೊ ತಯಾರಾದ್ಲು. ಮನಿ ನಡಸ್ಗೊಂಡು ಹೊಂಟ್ಲು. ಶಿಕ್ಷಣ ತಪ್ಪಿದ್ದಕ್ಕ ತ್ರಾಸ ಆದರೂ ನಮಗ ಛೋಲೋ ಓದಲಿಕ್ಕೆ ಹೇಳತಿದ್ಲು. ನೀಲೂಗ ಅಭ್ಯಾಸ ಮಾಡಸತಿದ್ಲು. ಮದ್ಲ ಛಂದ ಅಕಿ. ಈಗಂತೂ ವಯಸ್ಸು. ಕೇಳ್ತೀರೇನು? ಹರೇ ತುಂಬಿ ಬರಲಿಕ್ಕತ್ತಿತ್ತು. ಧೊಡ್ಡಾಕ್ಯಾದ್ಲು. ಹುಡುಗರಲ್ಲ, ಮುದುಕರೂ ತಿರತಿರಗಿ ನೋಡುವಂಗಾದ್ಲು. ಅವ್ವಗ ಕಾಳಜಿ. 'ಅಕಿನ್ನ ಒಬ್ಬಾಕಿನ್ನ ಬಿಡಬ್ಯಾಡ್ರಿ. ಯಾರರೆ ಅಕಿ ಜೋಡಿ ಹೋಗ್ರಿ' ಅಂತ ನಮಗ ತಾಕೀತು ಮಾಡಿದ್ಲು. ನಾವೂ ಹಂಗ, ಅಕಿ ಹೊರಗ ಹೋದಾಗೆಲ್ಲಾ ಅಕಿ ಜೋಡೀನ ಇರತಿದ್ವಿ.